ತೆಗೆದುಕೊಂಡು ಬಂದಿದ್ದೇನೆ. ಇಲ್ಲಿಯವರೆಗೆ ಸುಮಾರು ಐದು ಸಾವಿರ ಟನ್‌ನಷ್ಟು ಹುಲ್ಲು, ಜೋಳದ ಕಡ್ಡಿಯನ್ನು ತಾಲ್ಲೂಕು ಡೆವೆಲಪ್‌ಮೆಂಟ್ ಬೋರ್ಡ್ ಮುಖಾಂತರ, ಸೊಸೈಟಿಗಳ ಮುಖಾಂತರ ಸರ್ಕಾರದವರು ಆ ಪ್ರದೇಶಗಳಿಗೆ ಕಳುಹಿಸಿರತಕ್ಕದ್ದು. ಅದರ ಜೊತೆಗೆ, ಒಂದೇ ಸಮನಾಗಿ ಎಷ್ಟು ಸಾಧ್ಯವಾಗುತ್ತದೋ ಅಷ್ಟು ಮೇವನ್ನು ಒದಗಿಸಿಕೊಡತಕ್ಕ ವ್ಯವಸ್ಥೆಯಾಗಿದೆ. ಆಹಾರ ಧಾನ್ಯ ಸುಮಾರು ಐದು ಸಾವಿರ ಟನ್‌ನಷ್ಟು ಗುಲ್ಬರ್ಗ ಜಿಲ್ಲೆಗೆ ಬೇಕಾಗುತ್ತದೆ. ಅದರ ಜೊತೆಗೆ ಇನ್ನೂ 2 ಸಾವಿರ ಟನ್ ಅವಶ್ಯಕವಾಗಿ ಬೇಕಾಗುತ್ತದೆಂದು ಅಧಿಕಾರಿಗಳಿಗೆ 7—8—9 ಸಾವಿರ ಟನ್‌ವರೆಗೂ ಅಲ್ಲಿಗೆ ಆಹಾರಧಾನ್ಯ ಹೋಗಬೇಕೆಂದು ಹೇಳಿದ್ದೇವೆ. ಕೇಂದ್ರ ಸರ್ಕಾರದ ಜೊತೆಯಲ್ಲಿ ವ್ಯವಹಾರ ಮಾಡಿ ಅಲ್ಲಿಗೆ ಅವಶ್ಯಕವಾಗಿ ಬೇಕಾದ ಧಾನ್ಯ ಒದಗಿಸಿ ಕೊಡುವುದಕ್ಕೆ ವ್ಯವಸ್ಥೆ ಮಾಡಿದ್ದೇವೆ.

ಶ್ರೀ ಕಾಗೋಡು ತಿಮ್ಮಪ್ಪ.—ಸರ್ಕಾರದ ಅಂಕಿ ಅಂಶಗಳ ಪ್ರಕಾರ ಗುಲ್ಬರ್ಗ ಜಿಲ್ಲೆಯಲ್ಲಿ ಕೃಷಿ ಕಾರ್ಮಿಕರು 1 ಲಕ್ಷ 75 ಸಾವಿರ ಜನ ಇದ್ದಾರೆ. ತಾವು ಕೆಲಸ ಕೊಟ್ಟಿರತಕ್ಕದ್ದು ಕೇವಲ 1 ಲಕ್ಷ 22 ಸಾವಿರ ಜನಕ್ಕೆ, ಇದರ ಜೊತೆಗೆ ಸಣ್ಣ ಹಿಡುವಳಿದಾರರು ಬೇಸಾಯದ ಕೆಲಸ ಇಲ್ಲದೆ ಇರುವುದರಿಂದ ಅವರೂ ಕೂಲಿ ಮಾಡತಕ್ಕ ಪ್ರಸಂಗ ಬಂದು ನೀವು ಅಂದಾಜು ಮಾಡಿರುವ ಎಂಟು ಲಕ್ಷ ಜನರೂ ಕೆಲಸಕ್ಕೆ ಬರುವ ಸಂಭವ ಇದೆ. ಆದ್ದರಿಂದ ಅಲ್ಲಿರತಕ್ಕ ಬೇಸಾಯ ಕೆಲಸಗಾರರಿಗೂ ತಾವು ಕೊಡುವ ಕೆಲಸ ಸಾಲುವುದಿಲ್ಲ. ನೀವು ಮಾಡಿರುವ ಅಂದಾಜು ಕ್ರಮಬದ್ಧವಾಗಿಲ್ಲ ಕ್ರಮವಾದ ಅಂದಾಜು ಮಾಡುತ್ತೀರಾ ?

ಶ್ರೀ ಎನ್. ಹುಚ್ಚಮಾಸ್ತಿಗೌಡ.—ಆ ಜಿಲ್ಲೆಯ ಮೂರು ತಾಲ್ಲೂಕುಗಳಿಂದ ಶೋರಾಪುರ್, ಷಹಪುರ್ ಮತ್ತು ಯಾದಗಿರಿಯಲ್ಲಿ ರಾಟಿ ಬೆಳೆಯಾಗಿದೆ. ಅಲ್ಲಿ ವ್ಯವಸಾಯಗಾರರಿಗೆ ಸಭ್ಯ ಕೆಲಸ ಸಿಕ್ಕುತ್ತದೆ. ಇನ್ನು ಮಂಡೆ ಎರಡು ಲಕ್ಷವಲ್ಲ ಎರಡೂವರೆ ಲಕ್ಷ ಜನಗಳಿಗೆ ಕೂಲಿ ಒದಗಿಸಿಕೊಡುವುದಕ್ಕೋಸ್ಕರ ಇನ್ನೂ ಕೆಲವು ಮೈನರ್ ಇರಿಗೇಷನ್ ಕಾಮಗಾರಿಗಳನ್ನು ಲಘ್ವ್ ಇರಿಗೇಷನ್ ಕಾಮಗಾರಿಗಳ ಅಂದಾಜು ತಯಾರು ಮಾಡಿ ನಾವು ಕೆಲಸವನ್ನು ಗೊತ್ತು ಮಾಡಿದ್ದೇವೆ. ಅವನ್ನು ತೆಗೆದುಕೊಳ್ಳುವ ಸಂದರ್ಭ ಬಂದರೆ, ತೆಗೆದುಕೊಂಡು ಹೆಚ್ಚು ಜನಕ್ಕೆ ಕೆಲಸವನ್ನು ಒದಗಿಸಿ ಕೊಡುತ್ತೇವೆ.

Sri J. P. SARWESH.—May I know whether the Government is getting co-operation from all political parties in solving the miseries of the people of the drought-affected areas ?

ಶ್ರೀ ಎನ್. ಹುಚ್ಚಮಾಸ್ತಿಗೌಡ.—ಮಾನ್ಯ ಸದಸ್ಯರಿಗೆ ಗೊತ್ತಿರುವ ಹಾಗೆ ರಾಜ್ಯ ಮಟ್ಟದಲ್ಲಿ ಒಂದು ಸಮಿತಿಯನ್ನು ಮಾಡಿ ಎಲ್ಲಾ ಪಕ್ಷದ ಸದಸ್ಯರುಗಳು ಆ ಸಮಿತಿಯಲ್ಲಿದ್ದಾರೆ. ಯಾವ ಯಾವ ಪಕ್ಷದ ಸದಸ್ಯರು ಸಮಿತಿಯಲ್ಲಿಲ್ಲವೋ ಅವರನ್ನು ಅವಶ್ಯಕ ಇದ್ದರೆ ಸೇರಿಸಿಕೊಂಡು ಆ ಪ್ರದೇಶಗಳ ಬಗ್ಗೆ ಸಲಹೆ ಮಾಡುವುದಕ್ಕೂ ಮತ್ತು ಸಹಕಾರ ಕೊಡಬೇಕೆಂದೂ ಈ ಸಂದರ್ಭದಲ್ಲಿ ನಾನು ಪ್ರಾರ್ಥನೆ ಮಾಡುತ್ತೇನೆ.

Shifting of Cattle from Gulbarga District

347. Sri BAPU GOWDA RAYAPPA (Shahapur).—

Will the Minister for Revenue be pleased to state :—

(*a*) whether Government has issued any Government Order to shift the cattle of Gulbarga District to the District of Belgaum ;

(*b*) if so, the number of cattle shifted so far in the district ?

Sri N. HUTCHAMASTHY GOWDA (Minister for Revenue).—

(*a*) No order to shift cattle from Gulbarga District to Belgaum District has been issued. In view of acute scarcity of fodder in Gulbarga district, the people were advised to move the cattle to the forests of Western Ghats in the districts of Belgaum and North Kanara and the local officers were instructed to provide certain facilities on the route.

(*b*) None. A camp at Gangapur has been opened. About 2,606 cattle have been admitted.

ಶ್ರೀ ಬಾಪುಗೌಡ ರಾಯಪ್ಪ.—ತಮ್ಮ ಉತ್ತರವಲ್ಲಿ, ಗುಲ್ಬರ್ಗ ಜಿಲ್ಲೆಯ ಜಾನುವಾರುಗಳನ್ನು ಬೆಳಗಾವಿ ಜಿಲ್ಲೆಗೆ ರವಾನಿಸುವುದಕ್ಕೆ ಸರ್ಕಾರ ಆದೇಶವನ್ನೇನಾದರೂ ನೀಡಿದ್ದಾರೆಯೇ ಎಂದು ಕೇಳಿದ್ದಕ್ಕೆ, ಅವರಿಗೆ ಒಂದು ಅಡ್ವೈಸ್ ತರಹ ಸೂಚನೆ ಕೊಟ್ಟಿದ್ದೇವೆ ಎಂದು ಹೇಳಿದಿರಿ. ಈ ಒಂದು ಹೇಳಿಕೆಯ ಪ್ರಚಾರ ಬಳ್ಳಾರಿಯಿಂದ ದನಕರುಗಳು ಬೆಳಗಾಂಗೆ ಹೋಗುವುದಕ್ಕೆ ಏನು ಏನು ವ್ಯವಸ್ಥೆ ಮಾಡಿದ್ದೀರಿ ?

†ಶ್ರೀ ಎನ್. ಹುಚ್ಚಮಾಸ್ತಿಗೌಡ.—ಮಾನ್ಯ ಸದಸ್ಯರಿಗೆ ಗೊತ್ತಿರುವ ಹಾಗೆ ನಾವು ಆರ್ಡರ್ ಮಾಡದೆ, ಸಲಹೆ ಮಾತ್ರ ಈ ರೀತಿ ವ್ಯವಸ್ಥೆ ಮಾಡಿದರೆ ಸಹಾಯಕವಾಗುತ್ತದೆ ಎಂದು ಹೇಳಿದ್ದೇವು. ಆ ಕೆಲಸದ ಕಡೆ ಗಮನಕೊಡುವುದಕ್ಕೆ ಅನುಕೂಲವಾಗುತ್ತದೆ ಎಂದು ಏನೆಂತಿ ಮಾಡಿಕೊಂಡೆವು. ಮಾನ್ಯ ಸದಸ್ಯರು ಕೆಲವರು ಹಿಂದೆ ಮಹಮದ್ ಬಿನ್ ತೊಗಲಕ್‌ನ ಕಾಲದಲ್ಲಿ ಡೆಲ್ಲಿಯಿಂದ ದೇವಗಿರಿಗೆ ಹೋದಂತೆ ಹೋಗಬೇಕೇ ಎಂದು ಟೀಕೆ ಮಾಡಿದ್ದರಿಂದ, ಜನಗಳು ಇದರಲ್ಲಿ ವಿಶ್ವಾಸ ಇಡದೆ ಇರುವ ಹಾಗೆ ಮಾಡಿದ್ದರಿಂದ ಅಲ್ಲಿಗೆ ದನಗಳು ಹೋಗಲಿಲ್ಲ ಎಂದು ಹೇಳಬಹುದು.

ಶ್ರೀ ಬಾಪುಗೌಡ ರಾಯಪ್ಪ.—ಈಗಾಗಲೇ ಗುಲ್ಬರ್ಗ ಜಿಲ್ಲೆಯ ಗಾಣಗಾಪುರಕ್ಕೆ 2606 ದನಗಳನ್ನು ಕಳುಹಿಸಲಾಗಿ, ಆ ದನಗಳ ಪೈಕಿ 400 ದನಗಳು ಅಲ್ಲಿ ನತ್ತವೆ. ಸಾಗಿಸುವ ಕಾಲಕ್ಕೆ ತಿಂಡಿ, ತಿನಸು ಏನಾದರೂ ಹಾಕತಕ್ಕ ವ್ಯವಸ್ಥೆ ಇರಲಿಲ್ಲವೇ ತಮ್ಮ ಅಡ್ವೈಸ್ ಏನು ಎನ್ನುವುದನ್ನು ಸ್ಪಷ್ಟೀಕರಣ ಮಾಡುತ್ತೀರಾ ?

ಶ್ರೀ ಎನ್. ಹುಚ್ಚಮಾಸ್ತಿಗೌಡ.—ಗಾಣಗಾಪುರಕ್ಕಾಗಲಿ, ಇನ್ನೊಂದು ಕಡೆಗಾಗಲೀ ದಿನದಿಂದ ದಿನಕ್ಕೆ ಮೇವು ಕಡಿಮೆಯಾಗುವಾಗ ದನಗಳು ಸಾಯುತ್ತವೆ ಎನ್ನುವುದು ಎಲ್ಲರಿಗೂ ಗೊತ್ತಿರುವ ವಿಷಯ. ಗಾಣಗಾಪುರಕ್ಕೆ ದನಗಳನ್ನು ತೆಗೆದುಕೊಂಡು ಬರುವಾಗ ತೀರಾ ಸುಸ್ತಾಗಿ ನಾಳೆಯೋ ನಾಡಿದ್ದೋ ಸಾಯುತ್ತವೆ ಎನ್ನುವಂಥ ದನಗಳನ್ನು ಕೆಲವರು ತೆಗೆದುಕೊಂಡು ಬಂದಿದ್ದಾರೆ. ಸರ್ಕಾರಕ್ಕೆ ಎಷ್ಟು ಶಕ್ತಿ ಇದೆಯೋ ಅಷ್ಟು ಪ್ರಯತ್ನ ಮಾಡಿ ಮೇವನ್ನು ಒದಗಿಸಿಕೊಡುವುದಕ್ಕೆ ಪ್ರಯತ್ನ ಮಾಡಿದ್ದೇವೆ. ಇದು ಒಂದು ಮಾರ್ಗವೆಂದು ತಿಳಿದು, ಇದು ಸರಿ ಹೋಗಲಿಲ್ಲದಿದ್ದರೆ ಬೇರೆ ಯಾವುದಾದರೂ ಮಾರ್ಗವನ್ನು ಮಾನ್ಯ ಸದಸ್ಯರು ಸಲಹೆ ಮಾಡಿ ಎಂದು ಕೇಳಿಕೊಂಡಿದ್ದರೂ ಅವರು ಯಾವ ಸಲಹೆಯನ್ನು ಮಾಡುವುದಕ್ಕಾಗಲಿಲ್ಲ. ಈಗ ಇರತಕ್ಕ ಪರಿಸ್ಥಿತಿಯಲ್ಲಿ ಇಷ್ಟರಮಟ್ಟಿಗೆ ಆಗಿದೆ.

ಶ್ರೀ ಎಚ್. ಡಿ. ದೇವೇಗೌಡ.—ಗಾಣಗಾಪುರದಲ್ಲಿ ಎಷ್ಟು ದನಗಳು ನತ್ತವು ? ಈ ದನಗಳಿಗೆ ಪಶುಸಂಗೋಪನ ಇಲಾಖೆಯವರು ಒಂದು ದಿನಕ್ಕೆ ಎಷ್ಟು ಆಹಾರವನ್ನು ಕೊಡಬೇಕು ಎಂದು ತಿಳಿಸಿದ್ದರೇ, ಎಷ್ಟು ಆಹಾರವನ್ನು ಆ ದನಗಳಿಗೆ ಕೊಟ್ಟಿದ್ದೀರಾ ?

ಶ್ರೀ ಎನ್. ಹುಚ್ಚಮಾಸ್ತಿಗೌಡ.—ಆ ಇಲಾಖೆಯವರು ಪ್ರತಿದಿವಸ ಒಂದು ರಾಸಿಗೆ ಐದು ಕೆ. ಜಿ. ಮೇವು ಕೊಡಬೇಕು ಎಂದು ಹೇಳಿದ್ದಾರೆ. ಅದರಂತೆ ಕೊಡುತ್ತಿದ್ದೇವೆ. ಎಷ್ಟು ದನ ನತ್ತವೆ ಎಂದು ಅಂಕೆ ಅಂಶಗಳು ನನ್ನಲ್ಲಿಲ್ಲ, ಬೇರೆ ಪ್ರಶ್ನೆ ಕೇಳಿದರೆ ಅದನ್ನು ಕೊಡುತ್ತೇನೆ.

Sri D. B. KALMANKAR.—Is it not a fact that the Government has made arrangements to open fodder depots in each taluka and has also come forward to bear the expenditure for the transport of fodder brought by private people ?

ಶ್ರೀ ಎನ್. ಹುಚ್ಚಮಾಸ್ತಿಗೌಡ.—ಈಗ ಗುಲ್ಬರ್ಗ ಒಂದು ಜಿಲ್ಲೆಯಲ್ಲಿ 41 ಫಾರ್ ಡಿಪೋ ಗಳನ್ನು ಹಾಕಿದ್ದೇವೆ. ಹೊರಗಡೆಯಿಂದ ಸರ್ಕಾರದವರು ತರಿಸತಕ್ಕಂಥದ್ದಾಗಲಿ, ಖಾಸಗೀ ಯವರು ಕಳುಹಿಸಿಕೊಡತಕ್ಕಂಥದ್ದಾಗಲೀ, ಅದಕ್ಕೆ ತಕ್ಕ ವ್ಯವಸ್ಥೆಯನ್ನು ಮಾಡಿದ್ದೇವೆ. ಖಾಸಗೀ ಯವರು 2500 ಟನ್‌ವರೆಗೂ ಮೇವನ್ನು ಒದಗಿಸಿಕೊಟ್ಟಿದ್ದಾರೆ. ಅವರು ಮೇವನ್ನು ಸಾಗಿಸತಕ್ಕ ಖರ್ಚನ್ನು ಸರ್ಕಾರ ಪೂರ್ಣವಾಗಿ ಕೊಡುತ್ತಿದೆ. ಸರ್ಕಾರ ತಂದು ಕೊಡುವುದರ ಜೊತೆಗೆ ಖಾಸಗೀಯವರು ಮೇವನ್ನು ತಂದುಕೊಡುತ್ತಿದ್ದಾರೆ. ಈ ಕೆಲಸಕ್ಕೆ ಮುಂದೆ ಬಂದಂಥ ಸಂಸ್ಥೆ ಗಳಿಗೆ ನಾವು ಅವಕಾಶ ಮಾಡಿಕೊಟ್ಟಿದ್ದೇವೆ. ಇದರ ಜೊತೆಗೆ ಬೆಳಗಾಂ ಡಿಸ್ಟ್ರಿಕ್ಟ್‌ನ ಕೆಲವು ಭಾಗ ಮತ್ತು ನಾರ್ತ್ ಕೆನರಾ ಜಿಲ್ಲೆಯಲ್ಲಿ ಕೆಲವು ಭಾಗದಿಂದ ಸೊಂಡೂರಿನ ಅರಣ್ಯ ಪ್ರದೇಶದಿಂದ ಹುಲ್ಲನ್ನು ಕಾಯಿದು ಇಲ್ಲಿಗೆ ಸಾಗಿಸಿ ಒದಗಿಸಿಕೊಟ್ಟಿದ್ದಾರೆ.

Educated Unemployed S. C. People in Belgaum District

413. Sri P. P. HEGRE (Chikodi).—

Will the Minister for Labour be pleased to state :—

(*a*) the number of educated unemployed Scheduled Castes people who have registered in Employment Exchanges as on 1-1-1972 in Belgaum District (separate figures of S. S. L. C., Diplomas and Graduates may kindly be given) ;

(*b*) of them, the number of people employed up to the end of October, 1972 (separte figures may kindly be given) ;

(*c*) the number of educated unemployed Scheduled Castes people on the registers of the Employment Exchange in Belgaum District upto the latest convenient date ?

Sri AZEEZ SAIT (Minister for Labour). —

(*a*) The particulars are given in the Statement-I appended.

(*b*) The particulars are given in the Statement-II appended.

(*c*) The particulars of applicants on the Live Registers of the Belgaum Exchange as on 1-11-1972 are given in the Statement-III appended.